

بسم اللهِ الرّحمٰنِ الرّحيم

# ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಎಷ್ಟು ಉನ್ನತ ಮಟ್ಟದಲ್ಲಿ ಗೌರವಿಸುತ್ತಿದ್ದರೆಂಬುವುದಕ್ಕಿರುವ ಕೆಲವು ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **23-01-2015** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

**'ಖುತ್‌ಬ' ನಮಾಝಿನ ಭಾಗವಾಗಿದೆ. ಆದುದರಿಂದ ಖುತ್‌ಬದ ಸಮಯದಲ್ಲಿ ಮಾತನಾಡುವುದು ನಿಷಿದ್ಧವಾಗಿದೆ. ಯಾರನ್ನಾದರೂ ತಡೆಯಬೇಕಾಗಿದ್ದಲ್ಲಿ ಇಮಾಮ್ ಮಾತ್ರ ಖುತ್‌ಬದ ಸಮಯ ಹಾಗೆ ಮಾಡಬಹುದು. ಆದರೆ ನಮಾಝ್ ಅನುಷ್ಠಿಸುವಾಗ ಇಮಾಮ್ ಸಹ ಮಾತನಾಡಬಾರದು. ಮಕ್ಕಳಿಗೆ ಮನೆಯಲ್ಲಿ ಇವುಗಳ ಬಗ್ಗೆ ಈಗಲೇ ತರಬೇತಿ ನೀಡಬೇಕು. ನಮಾಝ್ ಮಾಡುವಾಗ ಮಾತನಾಡುವುದು ನಿಷಿದ್ಧವಾದ ಹಾಗೆ ಖುತ್‌ಬದ ಸಂದರ್ಭದಲ್ಲಿ ಮಾತನಾಡುವುದು ಸಹ ನಿಷಿದ್ಧವಾಗಿದೆ.**

---

*(ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ)* ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:

ಈಗ ನಾನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರು ವಿವರಿಸಿದ ಕೆಲವು ಘಟನೆಗಳನ್ನು ನಿಮ್ಮ ಮುಂದೆ ಇರಿಸುವೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಎಷ್ಟು ಉನ್ನತ ಮಟ್ಟದಲ್ಲಿ ಗೌರವಿಸುತ್ತಿದ್ದರೆಂದು ಅವುಗಳಿಂದ ಸ್ಪಷ್ಟವಾಗುತ್ತದೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಘಟನೆಯನ್ನು ಹೀಗೆ ವಿವರಿಸುತ್ತಾರೆ:

"ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಮ್ಮೆ ಲಾಹೋರಿನ ರೈಲ್ವೇಸ್ಟೇಶನ್‌ನಲ್ಲಿದ್ದಾಗ ಪಂಡಿತ್ ಲೇಖ್‌ರಾಮ್ ಅಲ್ಲಿಗೆ ಬಂದು ಸಲಾಮ್ ಹೇಳಿದರು. ಲೇಖ್‌ರಾಮ್ ಆರ್ಯ ಸಮಾಜದಲ್ಲಿ ಬಹಳ ದೊಡ್ಡ ಸ್ಥಾನ ಹೊಂದಿದ್ದರು. ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೊತೆಗಿದ್ದವರಿಗೆ ಬಹಳ ಸಂತೋಷವಾಯಿತು. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆತನ ಕಡೆಗೆ ಗಮನ ಹರಿಸಲಿಲ್ಲ. ಆಗ ಪ್ರಾಯಶಃ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಆತ ಸಲಾಮ್ ಹೇಳಿದುದು ತಿಳಿಯಲಿಲ್ಲ ಎಂದು ಭಾವಿಸಿ 'ಲೇಖ್‌ರಾಮ್ ತಮಗೆ ಸಲಾಮ್ ಹೇಳುತ್ತಿದ್ದಾರೆ' ಎಂದು ಸಂಗಡಿಗರು ಹೇಳಿದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಹಳ ಗಂಭೀರವಾಗಿ ಹೇಳಿದರು: 'ಆ ವ್ಯಕ್ತಿಗೆ ನಾಚಿಕೆ ಆಗುವುದಿಲ್ಲವೇ. ನನ್ನ ಯಜಮಾನರಿಗೆ ಬೈದುಕೊಂಡಿರುತ್ತಾನೆ ಮತ್ತು ನನಗೆ ಬಂದು ಸಲಾಮ್ ಹೇಳುತ್ತಿದ್ದಾನೆ' ಎಂದು ಹೇಳಿದರು."

ಇದೇ ಘಟನೆ ಬಗ್ಗೆ ಇನ್ನೊಂದು ಕಡೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಆರ್ಯ ಸಮಾಜಿಗಳಲ್ಲಿ ಲೇಖ್‌ರಾಮ್‌ರಿಗೆ ಬಹಳ ದೊಡ್ಡ ಗೌರವದ ಸ್ಥಾನ ಇತ್ತು. ಆದ ಕಾರಣ ದೊಡ್ಡ ದೊಡ್ಡ ಜನರು ಅವರನ್ನು ಭೇಟಿಯಾಗುವುದು ಗೌರವಾರ್ಹವೆಂದು ಗಣಿಸುತ್ತಿದ್ದರು. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಇದ್ದ ಅಭಿಮಾನ ನೋಡಿರಿ. ಲೇಖ್‌ರಾಮ್ ಸ್ವತಃ ಭೇಟಿಯಾಗಲು ಬರುತ್ತಾರೆ. ಆದರೆ ನನ್ನ ಯಜಮಾನರನ್ನು ಬೈಯ್ಯುವುದನ್ನು ಬಿಟ್ಟುಬಿಡಲಿ. ಆಮೇಲೆ ಭೇಟಿಯಾಗುವೆನು ಎಂದು ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ. ಈ ಘಟನೆಯಿಂದ ಒಂದು ಪಾಠ ನಮಗೆ ಲಭಿಸುತ್ತದೆ. ದೊಡ್ಡ ಜನರಿಗೆ ಅವರು ದೊಡ್ಡವರಾದ ಕಾರಣ ಸಲಾಮ್ ಹೇಳಿದರೆ ನಮ್ಮ ಗೌರವ ಹೆಚ್ಚುತ್ತದೆ ಎಂದು ತಿಳಿಯಬಾರದು. ಬಡವರ ಗೌರವದ ಬಗ್ಗೆ ಸಹ ಗಮನ ನೀಡುವುದು ಆವಶ್ಯಕವಾಗಿದೆ. ಅಭಿಮಾನ ತೋರಿಸುವುದು ಎಲ್ಲಕ್ಕಿಂತ ಮುಖ್ಯವಾಗಿದೆ. ಒಬ್ಬ ದೊಡ್ಡ ಮನುಷ್ಯ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಏನಾದರೂ ತಪ್ಪು ಹೇಳಿದರೆ ಅವನು ಎಷ್ಟು ದೊಡ್ಡ ಸ್ಥಾನದಲ್ಲಿದ್ದರೂ ಅವನಿಗೆ ಮಹತ್ವ ನೀಡುವ ಆವಶ್ಯಕತೆ ಇಲ್ಲ.

ಇದೇ ರೀತಿ ಇನ್ನೊಂದು ಸಂಭವವನ್ನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸುತ್ತಾರೆ:

"ಹಝ್ರತ್ ವಾಗ್ದತ್ತ ಮಸೀಹರು ತಮ್ಮ ಮಕ್ಕಳೊಂದಿಗೆ ಹೇಗೆ ವರ್ತಿಸುತ್ತಿದ್ದರೆಂದರೆ ಅವರು ಎಂದಾದರೂ ಕೋಪದಿಂದ ವರ್ತಿಸಬಹುದೆಂದು ಯೋಚಿಸಲು ಸಹ ಸಾಧ್ಯವಿರಲಿಲ್ಲ. ಅವರು ನಮ್ಮೊಂದಿಗೆ ಬಹಳ ಪ್ರೀತಿಯಿಂದ ವರ್ತಿಸುತ್ತಿದ್ದರು. ನಮ್ಮ ಚಿಕ್ಕ ಸಹೋದರ ಮುಬಾರಕ್ ಅಹ್ಮದನನ್ನು ಅವರು ಬಹಳ ಪ್ರೀತಿಸುತ್ತಿದ್ದರು. ಮತ್ತು ಬೇರೆ ಯಾರೊಂದಿಗೂ ಅಷ್ಟು ಪ್ರೀತಿ ಹೊಂದಲಾರರೆಂದು ನಾವು ಭಾವಿಸುತ್ತಿದ್ದೆವು. ಆದರೆ ಈ ಪ್ರೀತಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಇದ್ದ ಪ್ರೀತಿಗಿಂತ ಹೆಚ್ಚಾಗಿರಲಿಲ್ಲ. ಅವರ ಈ ಪ್ರಿಯ ಪುತ್ರ ಒಮ್ಮೆ ಅಜ್ಞಾನದಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅಗೌರವ ಸೂಚಿಸುವ ಏನೋ ಮಾತನ್ನು ಹೇಳಿದಾಗ ಅವರು ಆ ಹುಡುಗನಿಗೆ ಜೋರಾಗಿ ಹೊಡೆದರು."

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಇನ್ನೊಂದು ಘಟನೆ ಹೀಗೆ ವಿವರಿಸುತ್ತಾರೆ:

"ಲಾಹೋರಿನಲ್ಲಿ ಆರ್ಯ ಸಮಾಜಿಗಳು ಒಂದು ಸಮ್ಮೇಳನ ನಡೆಸಿದರು. ಅದರಲ್ಲಿ ಭಾಗವಹಿಸಲು ಹಝ್ರತ್ ವಾಗ್ದತ್ತ ಮಸೀಹ್ ಅಲೈಹಿಸ್ಸಲಾಮರಿಗೂ ಆಮಂತ್ರಣ ನೀಡಲಾಗಿತ್ತು. ಆ ಸಮ್ಮೇಳನದ ಪ್ರಾಯೋಜಕರು ಅವರಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ನಿಂದನೆಯ ಮಾತು ಏನೂ ಉಂಟಾಗಲಾರದು ಎಂದು ವಾಗ್ದಾನ ನೀಡಿದ್ದರು. ಆದರೆ ಸಮ್ಮೇಳನದಲ್ಲಿ ಪ್ರವಾದಿವರ್ಯರನ್ನು ಬಹಳವಾಗಿ ನಿಂದಿಸಲಾಯಿತು. ನಮ್ಮ ಜಮಾಅತಿನ ಕೆಲವರು ಆ ಸಮ್ಮೇಳನದಲ್ಲಿದ್ದರು. ಅವರಲ್ಲಿ ಮೌಲವಿ ನೂರುದ್ದೀನ್ ಸಾಹೇಬರು ಸಹ ಇದ್ದರು. ಅವರನ್ನು ಹಝ್ರತ್ ವಾಗ್ದತ್ತ ಮಸೀಹರು ಬಹಳ ಗೌರವಿಸುತ್ತಿದ್ದರು. ಆದರೆ ಆ ಸಮ್ಮೇಳನದ ಸಮಾಚಾರ ಲಭಿಸಿದಾಗ ಹಝ್ರತ್ ವಾಗ್ದತ್ತ ಮಸೀಹ್ ಅಲೈಹಿಸ್ಸಲಾಮ್ ಹೇಳಿದರು: 'ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಿಂದಿಸುವ ಮಾತುಗಳನ್ನು ಆಲಿಸುತ್ತಾ ನಿಮಗೆ ಅಲ್ಲಿ ಕುಳಿತಿರಲು ಹೇಗೆ ಸಾಧ್ಯವಾಯಿತು. ನಿಮ್ಮ ಅಭಿಮಾನ ಅದನ್ನು ಹೇಗೆ ಅನುಮತಿಸಿತು. ನೀವು ಏಕೆ ಅಲ್ಲಿಂದ ಎದ್ದು ಬರಲಿಲ್ಲ' ಎಂದು ಹೇಳಿದರು. ಈ ಮಾತುಗಳಿಂದ ಅವರು ಮೌಲವಿ ಸಾಹೇಬರೊಂದಿಗೆ ಬಹಳ ಸಿಟ್ಟುಗೊಂಡರೆಂದು ಭಾಸವಾಗುತ್ತಿತ್ತು. ನಾನು ಸಹ ಅಲ್ಲಿಗೆ ಹೋಗಿದ್ದೆ. ನನ್ನನ್ನು ಸಹ ತೀವ್ರವಾಗಿ ಆಕ್ಷೇಪಿಸಿ ಹೇಳಿದರು– ನೀವೆಲ್ಲರೂ ಅಲ್ಲಿ ಕುಳಿತುಕೊಂಡಿದ್ದುದು ಏಕೆ?"

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರೋಧಿಗಳು ಆರೋಪಿಸುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಿಂತ ದೊಡ್ಡವರೆಂದು ಭಾವಿಸುತ್ತಿದ್ದರೆಂದು. ಏನು ಈ ಜನರು ಇಂತಹ ಭಾವ ಪ್ರಕಟಣೆಗಳನ್ನು ಸಮಗಟ್ಟ ಬಲ್ಲರೇ. ಹಾ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಅವರಿಗಿದ್ದ ಪ್ರೇಮವನ್ನು ಈ ಜನರು ಮನವರಿಕೆ ಮಾಡಿದರೆ ಎಷ್ಟು ಚೆನ್ನಾಗಿತ್ತು!

ಅಬ್ದುಲ್ಲಾ ಆಥಮ್‌ರೊಂದಿಗೆ ನಡೆದ ವಾದಪ್ರತಿವಾದದ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ಈ ವಾದಪ್ರತಿವಾದ ಜರಗುವ ಮೊದಲೇ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಾನು ವಾಗ್ದತ್ತ ಮಸೀಹ್ ಎಂದು ವಾದಿಸಿದ್ದರು. ಮೌಲವಿಗಳು ಅವರ ಬಗ್ಗೆ ಕಾಫಿರ್ ಎಂದೂ ವಾಜಿಬುಲ್ ಖತ್ಲ್ (ಕೊಲ್ಲಲ್ಪಡಬೇಕಾದವನು) ಎಂದೂ ಫತ್ವ ಹೊರಡಿಸಿದ್ದರು. ಇಂತಹ ಸಂದರ್ಭದಲ್ಲಿ ಜಂಡಿಯಾಲಾ ಎಂಬ ಊರಿನ ಓರ್ವ ಅಹ್ಮದಿಯೇತರ ಮುಸ್ಲಿಮನನ್ನು ಅಬ್ದುಲ್ಲಾ ಆಥಮ್ ವಾದಪ್ರತಿವಾದಕ್ಕೆ ಆಹ್ವಾನಿಸಿದ್ದರು. ಆ ಮುಸ್ಲಿಂ ವ್ಯಕ್ತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ತನ್ನ ಪರವಾಗಿ ವಾದಪ್ರತಿವಾದ ನಡೆಸಲು ಆಮಂತ್ರಿಸಿದರು. ಆಗ ಅವರು ತಕ್ಷಣ ಅದಕ್ಕೋಸ್ಕರ ಸಿದ್ಧರಾದರು. ಅವರು ಆಗ 'ಈ ಕ್ರೈಸ್ತ ಜನರು ಅಹ್ಮದಿಯೇತರ ಮುಸ್ಲಿಮರಷ್ಟು ನನ್ನ ಶತ್ರುಗಳಲ್ಲ. ಕ್ರೈಸ್ತರು ನನ್ನನ್ನು ಕೊಲ್ಲಬೇಕೆಂದು ಹೇಳಿಲ್ಲ' ಎಂದು ಹೇಳಲಿಲ್ಲ. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗೌರವವನ್ನು ಕಾಪಾಡಲು ಅಲ್ಲಾಹನ ಏಕತ್ವವನ್ನು ಸ್ಥಾಪಿಸಲು ಖಾದಿಯಾನ್‌ನಿಂದ ಹೊರಗೆ ಹೋಗಿ ಮುಸ್ಲಿಮರ ಪರವಾಗಿ ವಾದಪ್ರತಿವಾದ ನಡೆಸಿದರು. ಅವರು ತಮ್ಮ ಇಸ್ಲಾಮ್ ಧರ್ಮ ವಿಶ್ವಾಸದ ಬಗ್ಗೆ ಎಷ್ಟು ಅಭಿಮಾನ ಹೊಂದಿದ್ದರೆಂದರೆ ಅವರು ಬೇರೆ ಏನನ್ನೂ ಗಮನಿಸಲಿಲ್ಲ."

ಈ ವಾದ ಪ್ರತಿವಾದ ಸುದೀರ್ಘವಾಗಿತ್ತು. ಹದಿನೈದು ದಿನಗಳ ಕಾಲ ನಡೆಯಿತು. ಅನಂತರ ಪ್ರಾರ್ಥನೆ ಮಾಡಿ ಒಂದು ಗಡುವು ನಿಶ್ಚಯಿಸಿ ಭವಿಷ್ಯವಾಣಿ ಪ್ರಕಟಿಸಿದರು. ಈ ಭವಿಷ್ಯವಾಣಿ ಬಗ್ಗೆ ಅವರು ಹೀಗೆ ಹೇಳಿದರು: "ನಾನು ಬಹಳ ನೊಂದು ಅಲ್ಲಾಹನೊಡನೆ ಪ್ರಾರ್ಥಿಸಿದೆ. ಬಲಹೀನರಾದ ನಾವು ನಿನ್ನ ತೀರ್ಮಾನದ ಹೊರತು ಏನನ್ನೂ ಮಾಡಲಾರೆವು ಎಂದು. ಆಗ ಅಲ್ಲಾಹನು ಹೀಗೆ ತಿಳಿಸಿದನು: ಈ ಎರಡು ಪಕ್ಷಗಳಲ್ಲಿ ಯಾವ ಪಕ್ಷ ಸತ್ಯ ದೇವನನ್ನು ಬಿಟ್ಟು ಬಿಡುತ್ತದೆಯೋ ಹದಿನೈದು ತಿಂಗಳೊಳಗೆ ನರಕಾಗ್ನಿಗೆ ತುತ್ತಾಗುವುದು. ಕಠಿಣ ಅಪಮಾನ ಸಂಭವಿಸುವುದು. ಆದರೆ ಶರತ್ತೇನೆಂದರೆ ಸತ್ಯದ ಕಡೆಗೆ ಮರಳದಿದ್ದರೆ ಮಾತ್ರ. ಯಾರು ಸತ್ಯದಲ್ಲಿದ್ದು ಸತ್ಯ ದೇವನನ್ನು ನಂಬುತ್ತಾರೋ ಅವರ ಗೌರವ ಪ್ರಕಟವಾಗುವುದು."

ಈ ವಾದಪ್ರತಿವಾದದ ಪರಿಣಾಮದ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಎರಡು ಘಟನೆಗಳನ್ನು ವಿವರಿಸಿದ್ದಾರೆ:

"ಒಮ್ಮೆ ಬಹಾವಲ್‌ಪುರದ ನವಾಬರ ಆಸ್ಥಾನದಲ್ಲಿ ಕೆಲವು ಜನರು 'ಮಿರ್ಝಾ ಸಾಹೇಬರ ಭವಿಷ್ಯವಾಣಿ ಈಡೇರಲಿಲ್ಲ ಆಥಮ್ ಈಗಲೂ ಜೀವಿಸಿದ್ದಾರೆ' ಎಂದು ಅಪಹಾಸ್ಯ ಮಾಡುತ್ತಿದ್ದರು. ಆಗ ಅಲ್ಲಿ ಖ್ವಾಜಾ ಗುಲಾಮ್ ಫರೀದ್ ಸಾಹೇಬ್ ಚಾಚ್‌ಡಾಂವಾಲೇ ಎಂಬ ಹಿರಿಯರು ಕುಳಿತಿದ್ದರು. ನವಾಬ್ ಸಾಹೇಬರು ಅವರ ಶಿಷ್ಯರಾಗಿದ್ದರು. ಮಾತು ಮಾತಿನಲ್ಲಿ ನವಾಬರ ಬಾಯಿಂದಲೂ– ಮಿರ್ಝಾ ಸಾಹೇಬರ ಭವಿಷ್ಯವಾಣಿ ಪೂರ್ತಿಯಾಗಲಿಲ್ಲ, ಆಥಮ್ ಈಗಲೂ ಬದುಕಿದ್ದಾರೆ– ಎಂಬ ಮಾತು ಹೊರಬಿತ್ತು. ಆಗ ಖ್ವಾಜಾ ಸಾಹೇಬರು ಬಹಳ ಕೋಪಗೊಂಡು ಹೇಳಿದರು: 'ಆಥಮ್ ಜೀವಂತವಾಗಿದ್ದಾನೆಂದು ಯಾರು ಹೇಳಿದರು? ನನಗಂತೂ ಅವನ ಶವ ಕಾಣಿಸುತ್ತಿದೆ' ಆಗ ನವಾಬ್ ಸಾಹೇಬರು ಸುಮ್ಮನಾದರು."

ಕೆಲವು ಜನರು ಬಾಹ್ಯವಾಗಿ ಜೀವಂತವಾಗಿರುವುದಾಗಿ ಕಾಣಿಸುತ್ತಾರಾದರೂ ಅವರು ಮೃತರಾಗಿರುತ್ತಾರೆ. ಕೆಲವರು ಮೃತರಾಗಿ ಕಂಡರೂ ಜೀವಂತವಾಗಿರುತ್ತಾರೆ. ಅಲ್ಲಾಹನ ಮಾರ್ಗದಲ್ಲಿ ಬಲಿದಾನ ನೀಡುವವರು ಜೀವಂತವಾಗಿರುತ್ತಾರೆ. ಜೀವಿಸುವವರಲ್ಲಿ ಹಲವರು ಆಧ್ಯಾತ್ಮಿಕ ದೃಷ್ಟಿಯಿಂದ ನೋಡುವವರಿಗೆ ಮೃತರಾಗಿ ಕಾಣಿಸುತ್ತಾರೆ. ಆದುದರಿಂದ

ಆಧ್ಯಾತ್ಮಿಕವಾಗಿ ಮೃತರಾದವರನ್ನು ಮತ್ತು ಆಧ್ಯಾತ್ಮಿಕವಾಗಿ ಜೀವಂತವಾಗಿರುವವರನ್ನು ಗುರುತಿಸುವುದು ಪ್ರತಿಯೊಬ್ಬರಿಗೂ ಸಾಧ್ಯವಾಗುವ ಕೆಲಸವಲ್ಲ. ಸತ್ಯವಿಶ್ವಾಸಿ ಅವರನ್ನು ಗುರುತಿಸಲು ಪ್ರಯತ್ನಿಸಬೇಕು.

ಅಬ್ದುಲ್ಲಾ ಆಥಮ್ ಆಧ್ಯಾತ್ಮಿಕವಾಗಿ ಮೃತನಾದುದು ಮಾತ್ರವಲ್ಲ ಶಾರೀರಿಕವಾಗಿಯೂ ಆತ ಮೃತನಾದನು. ಅದು ಭವಿಷ್ಯವಾಣಿಗಳ ಪ್ರಕಾರ ಸಂಭವಿಸಿತು. ಸ್ವಲ್ಪ ಹೆಚ್ಚಿನ ಬಿಡುವು ಅವನಿಗೆ ದೊರಕಿತು ಎಂಬುದು ನಿಜ. ಆದರೆ ಅದರ ಕಾರಣವನ್ನು ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೇ ಸ್ವತಃ ಮುಂಚಿತವಾಗಿ ಹೇಳಿದ್ದರು.

ಆಥಮ್‌ನಿಗೆ ಸಂಬಂಧಿಸಿದ ಭವಿಷ್ಯವಾಣಿ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಬರೆದಿದ್ದಾರೆ:

"ಆಥಮ್ ಬಗ್ಗೆ ಮಾಡಲಾದ ಭವಿಷ್ಯವಾಣಿ ಈಡೇರಬೇಕಾದ ಕೊನೆಯ ದಿನ ಎಂದರೆ ಹದಿನೈದು ತಿಂಗಳ ಗಡು ಮುಕ್ತಾಯವಾಗುವ ದಿನ ಜನರು ಅಳುತ್ತಾ ಗೋಳಿಡುತ್ತಿದ್ದರು– ಓ ಅಲ್ಲಾಹ್, ಆಥಮ್ ಸಾಯಲಿ ಎಂದು ಪ್ರಾರ್ಥಿಸುತ್ತಾ ಇದ್ದರು. ಅದನ್ನು ನೋಡಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅತೃಪ್ತಿ ಸೂಚಿಸುತ್ತಾ ಹೀಗೆ ಹೇಳಿದರು: "ಅಲ್ಲಾಹನ ವಚನಗಳ ಬಗ್ಗೆ ಅಲ್ಲಾಹನಿಗಿಂತಲೂ ಮಿಗಿಲಾಗಿ ಯಾರಿಗಾದರೂ ಅಭಿಮಾನವಿರಲು ಸಾಧ್ಯವೇ? ಅಲ್ಲಾಹನು ಹೀಗೆ ಆಗುವುದು ಎಂದು ಹೇಳಿದರೆ ನಾವು ಅದನ್ನು ನಂಬಬೇಕು. ಹಾಗೆ ಖಂಡಿತ ಸಂಭವಿಸುವುದು. ಆದರೆ ದೇವನು ಹೇಳಿದುದನ್ನು ನಾವು ತಪ್ಪಾಗಿ ಗ್ರಹಿಸಿಕೊಂಡಿದ್ದರೆ, ಅವನು ನಮ್ಮ ತಪ್ಪು ಗ್ರಹಿಕೆ ಪ್ರಕಾರ ತೀರ್ಮಾನ ಮಾಡಬೇಕೆಂದೇನೂ ಇಲ್ಲ. ನಾವು ಒಬ್ಬನನ್ನು ಸತ್ಯವಂತನೆಂದು ನಂಬಿದರೆ ಅವನ ಮಾತುಗಳ ಬಗ್ಗೆ ದೃಢವಿಶ್ವಾಸ ಹೊಂದಬೇಕು. ಸತ್ಯವಿಶ್ವಾಸಿ ಅಲ್ಲಾಹನಲ್ಲಿ ಭರವಸೆ ಇಡಬೇಕು ಅಲ್ಲಾಹನು ಹೇಳಿದ ಮಾತು ಖಂಡಿತವಾಗಿಯೂ ಈಡೇರುತ್ತದೆ."

ಈ ಭವಿಷ್ಯವಾಣಿ ಭವ್ಯವಾಗಿ ಈಡೇರಿತು. ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅನೇಕ ಕಡೆ ಪ್ರಸ್ತಾಪಿಸಿದ್ದಾರೆ. ಒಂದು ಸ್ಥಳದಲ್ಲಿ ಹೀಗೆ ಹೇಳಿದ್ದಾರೆ:

"ನಮ್ಮ ಜಮಾಅತಿನವರು ಆಥಮ್‌ನ ಮನಃಪರಿವರ್ತನೆ ಬಗ್ಗೆ ಯಾವಾಗಲೂ ನೆನಪಿಡಬೇಕು. ಭವಿಷ್ಯವಾಣಿ ಆಲಿಸಿದ ಕೂಡಲೇ ಆಥಮ್ ತನ್ನ ನಾಲಗೆ ಹೊರಗೆ ಚಾಚಿ ಕಿವಿಗಳಿಗೆ ಕೈಗಳನ್ನಿರಿಸಿದನು. ಅವನು ನಡುಗಿದನು. ಅವನು ವಿವರ್ಣನಾದನು. ಬಹಳ ಜನರ ಮುಂದೆ ಅವನ ಈ ಮನಃಪರಿವರ್ತನೆ ಗೋಚರವಾಯಿತು. ಅವನು ಭಯಭೀತನಾದನು, ಒಂದು ನಗರದಿಂದ ಇನ್ನೊಂದಕ್ಕೆ ಪಲಾಯನ ಮಾಡುತ್ತಾ ಇದ್ದನು. ಅವನು ವಿರೋಧಿಸುವುದನ್ನು ನಿಲ್ಲಿಸಿದನು. ಇಸ್ಲಾಮಿಗೆ ವಿರುದ್ಧವಾಗಿ ಅದರ ನಂತರ ಆತನು ಏನನ್ನೂ ಬರೆಯಲಿಲ್ಲ. ಅವನನ್ನು ಪ್ರಮಾಣ ಮಾಡಲು ಬಹುಮಾನ ನೀಡುವುದಾಗಿ ಹೇಳಿ ಪ್ರಕಟಣೆ ಮೂಲಕ ಕರೆಯಲಾಯಿತು. ಆದರೆ ಅವನು ಪ್ರಮಾಣ ಮಾಡಲು ಸಿದ್ಧನಾಗಲಿಲ್ಲ, ಆದರೆ ಅವನು ಸಾಕ್ಷ್ಯಗಳನ್ನು ಅಡಗಿಸಲು ಪ್ರಯತ್ನಿಸಿದರೂ ಸ್ವಲ್ಪ ತಡವಾಗಿಯಾದರೂ ಮೃತ್ಯುವಿನ ದವಡೆಗೆ ತುತ್ತಾದನು."

ಇಂತಹ ವಿಷಯಗಳ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ಓದಿ ವಿಷಯಗಳನ್ನು ಸರಿಯಾಗಿ ಮನವರಿಕೆ ಮಾಡುವುದು ನಮ್ಮ ಕರ್ತವ್ಯವಾಗಿದೆ.

ಇದರ ಕುರಿತು ಇನ್ನೊಂದು ಕಡೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಈ ಭವಿಷ್ಯವಾಣಿ ಶರತ್ತು ಬದ್ಧವಾಗಿತ್ತು. ಅವನು ಗಾಬರಿಗೊಂಡಿದ್ದನು. ಅವನು ನಗರದಿಂದ ನಗರಕ್ಕೆ ಸುತ್ತಾಡುತ್ತಿದ್ದನು. ಅವನಿಗೆ ಮಸೀಹಾರು ದೇವರೆಂಬ ಬಗ್ಗೆ ದೃಢ ನಂಬಿಕೆ ಇದ್ದಲ್ಲಿ ಅವನು ಗಾಬರಿಗೊಳ್ಳಲು ಕಾರಣವೇನು. ಆದರೆ ಅದರೊಂದಿಗೇ ಅವನು ಸತ್ಯವನ್ನು ಮರೆಮಾಡಲು ಪ್ರಯತ್ನಿಸಿದನು. ಜನರನ್ನು ದಾರಿ ತಪ್ಪಿಸಲು ಪ್ರಯತ್ನಿಸಿದನು. ಸತ್ಯವನ್ನು ಮರೆಮಾಡಿದರೆ ಅಜ್ಞಾನಿಗಳು ದಾರಿ ತಪ್ಪಿಹೋಗುತ್ತಾರೆ. ಅಲ್ಲಾಹನು ತನ್ನ ಸತ್ಯವಾದ ವಾಗ್ದಾನ ಪ್ರಕಾರ ನಾವು ಪ್ರಕಟಿಸಿದ ಕೊನೆಯ ಇಶ್ತಿಹಾರ್‌ನಂತೆ ಏಳು ತಿಂಗಳೊಳಗೆ ಈ ಲೋಕದಿಂದ ಎತ್ತಲ್ಪಟ್ಟನು. ಯಾವ ಮೃತ್ಯು ಬಗ್ಗೆ ಅವನು ಹೆದರುತ್ತಿದ್ದನೋ ಮತ್ತು ಓಡುತ್ತಾ ಹೋಗುತ್ತಿದ್ದನೋ ಅದು ಅವನನ್ನು ಹಿಡಿಗೂಡಿತು. ಆಥಮನಿಗೆ ಸಂಬಂಧಪಟ್ಟ ವಿಷಯವನ್ನು ಅರ್ಥ ಮಾಡಲು ಜನರಿಗೆ ಯಾಕೆ ಕಷ್ಟವಾಗುತ್ತಿದೆ ಎಂದು ನನಗೆ ತಿಳಿಯುವುದಿಲ್ಲ. ಎಷ್ಟೆಲ್ಲಾ ಸಾಂದರ್ಭಿಕ ಸಾಕ್ಷ್ಯಗಳಿದ್ದೂ ನಿರಾಕರಿಸಲಾಗುತ್ತಿದೆ. ಸಾಂದರ್ಭಿಕ ಸಾಕ್ಷ್ಯಗಳ ಆಧಾರದಲ್ಲಿ ಅಪರಾಧಿಗಳಿಗೆ ಗಲ್ಲಿನ ಶಿಕ್ಷೆ ಸಹ ಲಭಿಸುತ್ತದೆ. ಆಥಮನಿಗೆ ಸಂಭವಿಸಿದುದು ಒಂದು ದೊಡ್ಡ ದೃಷ್ಟಾಂತವೇ ಆಗಿದೆ.

ಈ ವಾದ ಪ್ರತಿವಾದದ ಸಂದರ್ಭದಲ್ಲಿ ಕ್ರೈಸ್ತ ಪಾದರಿಗಳು ಒಂದು ಹಂತದಲ್ಲಿ ಕೆಲವು ಮುಸ್ಲಿಮರನ್ನು ತಮ್ಮ ಜೊತೆ ಸೇರಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅಪಹಾಸ್ಯಮಾಡಲು ಹೀಗೆ ಉಪಾಯ ಹೂಡಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಗಮಿಸಿದಾಗ ತಕ್ಷಣ ಕೆಲವು ಅಂಧರನ್ನೂ, ಕಿವುಡರನ್ನೂ, ಕುಂಟರನ್ನೂ, ಅಂಗವಿಕಲರನ್ನೂ ಅವರ ಮುಂದೆ ತಂದು ಈ ರೀತಿ ಹೇಳಿದರು: ನೀವು ವಾಸ್ತವಿಕವಾಗಿ ಮಸೀಹರಿಗೆ ಸಮಾನರಾಗಿದ್ದರೆ ಇವರನ್ನು ಸರಿಪಡಿಸಿ ತೋರಿಸಿರಿ. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನೀವು ನಂಬುತ್ತಿರುವ ನಿಮ್ಮ ಧರ್ಮ ಗ್ರಂಥದಲ್ಲಿ ಬರೆದಿದೆ– ಒಬ್ಬ ಕ್ರೈಸ್ತನಿಗೆ ಸಾಸಿವೆ ಕಾಳಿನಷ್ಟು ವಿಶ್ವಾಸವಿದ್ದರೂ ಅವನು ಯೇಸುಕ್ರಿಸ್ತರು ತೋರಿಸಿದಂತಹ ಪವಾಡಗಳನ್ನು ತೋರಿಸಬಲ್ಲನು ಎಂದು. ನಿಮ್ಮಲ್ಲಿ ಒಂದು ಸಾಸಿವೆ ಕಾಳಿನಷ್ಟಾದರೂ ವಿಶ್ವಾಸವಿದ್ದರೆ ನೀವು ಈ ಜನರನ್ನು ಸರಿಪಡಿಸಿ ತೋರಿಸಿರಿ.

ಈ ಉತ್ತರದಿಂದ ಪಾದರಿಗಳು ತಬ್ಬಿಬ್ಬಾದರು. ದೊಡ್ಡ ಪಾದರಿಗಳು ಆ ಅಂಗವಿಕಲರನ್ನೆಲ್ಲಾ ಅಲ್ಲಿಂದ ಎಳೆದುಕೊಂಡು ದೂರಸರಿಸಲು ತೊಡಗಿದರು. ಅಲ್ಲಾಹನು ತನ್ನ ಸಾಮೀಪ್ಯಗಳಿಸಿದವರಿಗೆ ಪ್ರತಿಯೊಂದು ಸಂದರ್ಭದಲ್ಲೂ ಗೌರವ ದಯಪಾಲಿಸುತ್ತಾನೆ ಅವರಿಗೆ ಎಂತಹ ಉತ್ತರ ಕಲಿಸುತ್ತಾನೆಂದರೆ ವಿರೋಧಿಗಳು ಸಂಪೂರ್ಣವಾಗಿ ಅವಾಕ್ಕಾಗುತ್ತಾರೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಮೀರ್ ಅಬ್ಬಾಸ್ ಅಲಿ ಸಾಹೇಬರ ಬಗ್ಗೆ ಹೀಗೆ ಬರೆದಿದ್ದಾರೆ: "ಮೀರ್ ಅಬ್ಬಾಸ್ ಅಲಿ ಸಾಹೇಬರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಶಿಷ್ಯರಾಗಿದ್ದರು. ಅವರ ಬಗ್ಗೆ ಇಲ್‌ಹಾಮ್ ಸಹ ಆಗಿತ್ತು. ಅಬ್ಬಾಸ್ ಅಲಿ ಅಹ್ಮದಿಯತ್‌ನಿಂದ ಮುರ್ತದ್ದ್ ಆದಾಗ ಅನೇಕರು ಆಕ್ಷೇಪಿಸಿದರು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: 'ಇಲ್‌ಹಾಮ್‌ನಲ್ಲಿ ಅಬ್ಬಾಸ್ ಅಲಿಯನ್ನು ಹೊಗಳಲಾಗಿದೆ ಸರಿ. ಆದರೆ ಅದು ಆ ವ್ಯಕ್ತಿ ಉನ್ನತ ಆಧ್ಯಾತ್ಮಿಕ ಸ್ಥಿತಿ ಹೊಂದಿದಾಗಿನ ಬಗ್ಗೆಯಾಗಿತ್ತು. ಆ ವ್ಯಕ್ತಿ ತನ್ನ ಶಕ್ತಿಗಳನ್ನು ದುರುಪಯೋಗಪಡಿಸಿದರು. ಅವರಲ್ಲಿ ದುರಹಂಕಾರ ತಲೆದೋರಿತು. ಆಗ ಅಲ್ಲಾಹನ ಕೋಪ ಅವರ ಮೇಲೆ ಎರಗಿ ಅವರು ಮುರ್ತದ್ದ್ ಆದರು. ಸೂರತುಲ್ ಫಾತಿಹದ ಕೊನೆಯಲ್ಲಿ ಕೆಡುಕಿನಿಂದ ರಕ್ಷಣೆ ಪಡೆಯಲು ಪ್ರಾರ್ಥನೆ ಕಲಿಸಲಾಗಿದೆ ಎಂಬುದನ್ನು ನಾವು ಮರೆಯಬಾರದು. ಅಲ್ಲಾಹನು ನಮ್ಮನ್ನು ಬಹುಮಾನ ಗಳಿಸಿದವರ ಜೊತೆಯಲ್ಲಿಯೇ ಇರಿಸಲಿ. ಕೆಟ್ಟ ಪ್ರಭಾವಗಳು ಎಂದೂ ತಲೆದೋರದಿರಲಿ ಎಂದು ವಿಶ್ವಾಸಿಗಳು ಪ್ರಾರ್ಥಿಸುತ್ತಲೇ ಇರಬೇಕು.'

ಬಾಹ್ಯವಾದ ಜ್ಞಾನದ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದೆಡೆ ಹೀಗೆ ಹೇಳಿದ್ದಾರೆ: "ಬಾಹ್ಯ ಜ್ಞಾನ ಹೊಂದಿರುವುದರ ಮೇಲೆ ಮಾತ್ರ ಹಿರಿತನದ ಅಸ್ತಿಭಾರ ಹಾಕಲು ಸಾಧ್ಯವಿಲ್ಲ. ಬಾಹ್ಯ ಜ್ಞಾನದ ಮೇಲೆ ಹಿರಿತನದ ಅಸ್ತಿಭಾರ ಹಾಕುವುದಾದರೆ ಲೋಕದಲ್ಲಿ ಆಗಮಿಸಿದ ಎಲ್ಲ ಪ್ರವಾದಿಗಳನ್ನೂ ಸುಳ್ಳುಗಾರರೆಂದು ಹೇಳಬೇಕಾದೀತು (ನಊರುಝುಬಿಲ್ಲಾಹ್) ಏಕೆಂದರೆ ಪ್ರವಾದಿಗಳನ್ನು ವಿರೋಧಿಸಿದವರೆಲ್ಲಾ ಬಾಹ್ಯ ಜ್ಞಾನ ಕರಗತ ಮಾಡಿದ ಪಂಡಿತರಾಗಿದ್ದರು." ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾರನ್ನು ಸಹ ಇಂತಹ ಜನರೇ ವಿರೋಧಿಸಿದರು. ಆ ಜನರು ತಮ್ಮನ್ನು ಬಾಹ್ಯ ಜ್ಞಾನದಲ್ಲಿ ಪರಿಣಿತರಾದ ಮಹಾ ಪಂಡಿತರೆಂದು ಗಣಿಸುತ್ತಿದ್ದರು.

ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯಸಂಧತೆ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಉದಾಹರಣೆ ನೀಡುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಒಂದು ಪಾರ್ಸೆಲ್‌ನಲ್ಲಿ ಒಂದು ಪತ್ರ ಹಾಕಿದ್ದರು. ಆ ಕಾಲದ ಅಂಚೆ ನಿಯಮ ಪ್ರಕಾರ ಅದು ಅಪರಾಧವಾಗಿತ್ತು. ಆದರೆ ಅದರ ಬಗ್ಗೆ ಅವರಿಗೆ ತಿಳಿದಿರಲಿಲ್ಲ. ಅಂಚೆ ಡಿಪಾರ್ಟ್‌ಮೆಂಟ್ ಅವರ ಮೇಲೆ ಮೊಕದ್ದಮೆ ಹೂಡಿತು. ಅವರಿಗೆ ಶಿಕ್ಷೆ ದೊರಬೇಕೆಂದು ವಾದಿಸಿತು. ಮಸೀಹ್ ಮೌಊದರ ವಕೀಲರು ಹೇಳಿದರು– 'ನಾನು ಪತ್ರ ಬೇರೆಯಾಗಿಯೇ ರವಾನಿಸಿದೆ ಎಂದು ಹೇಳಿರಿ. ಹೀಗೆ ಹೇಳದೆ ನೀವು ಶಿಕ್ಷೆಯಿಂದ ರಕ್ಷಿಸಲ್ಪಡುವ ಬೇರೆ ಮಾರ್ಗವಿಲ್ಲ'. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಏನೇ ಆಗಲಿ ನಾನು ಸುಳ್ಳು ಹೇಳಲಾರೆ. ನ್ಯಾಯಾಲಯದಲ್ಲಿ ಅವರೊಂದಿಗೆ ನೀವು ಈ ಪತ್ರವನ್ನು ಪಾರ್ಸಲ್‌ನೊಂದಿಗೆ ಇರಿಸಿದ್ದು ಹೌದಾ ಎಂದು ಕೇಳಲಾದಾಗ ಅವರು ಹೌದು ಎಂದು ಉತ್ತರಿಸಿದರು. ಆದರೆ ನನಗೆ ಅದು ತಪ್ಪೆಂದು ತಿಳಿದಿರಲಿಲ್ಲ ಎಂದು ಹೇಳಿದರು. ಆಗ ನ್ಯಾಯಾಧೀಶ ಹೇಳಿದರು: ನಾನು ಅವರನ್ನು ದೋಷಮುಕ್ತನಾಗಿ ಘೋಷಿಸುತ್ತೇನೆ. ಅವರು ಸತ್ಯವನ್ನು ಹೇಳಿದುದರಿಂದ.

ಈ ಘಟನೆ ನಾವು ಹಲವು ಸಾರಿ ಆಲಿಸಿದ್ದೇವೆ. ನಾವು ಕೇವಲ ಆಲಿಸಿ ಸಂತೋಷಪಟ್ಟಿದ್ದೇವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸತ್ಯ ಹೇಳುವ ಬಗ್ಗೆ ಈ ಉದಾಹರಣೆ ನಮ್ಮ ಮುಂದೆ ಇರಿಸಿದ್ದಾರೆ. ಆದರೆ ಯಾರು ತಮ್ಮ ಲಾಭಕ್ಕೋಸ್ಕರ ಸತ್ಯದ ಮಟ್ಟದಿಂದ ಕೆಳಗೆ ಹೋಗುತ್ತಾರೋ ಅವರು ತಮ್ಮ ವರ್ತನೆಯನ್ನು ಪರಿಶೀಲಿಸಬೇಕಾಗಿದೆ. ಈ ದೇಶದಲ್ಲಿ ಆಶ್ರಯಪಡೆಯಲು ಮತ್ತು ಇನ್‌ಶೂರೆನ್ಸ್ ಕಂಪೆನಿಗಳಿಂದ ಲಾಭ ಪಡೆಯಲು ತಪ್ಪು ವಿಧಾನಗಳನ್ನು ಅನುಸರಿಸಲಾಗುತ್ತಿದೆ. ಇಂತಹ ಕೆಲಸ ಮಾಡುವ ಅಹ್ಮದಿಯರು ಯೋಚಿಸಬೇಕು. ಹೀಗೆ ಮಾಡುವುದು ಅಹ್ಮದಿಯರಿಗೆ ಅನುಯೋಜ್ಯವಾದುದಲ್ಲ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಮ್ಮೆ ಒಂದು ಖುತ್‌ಬದಲ್ಲಿ ಜಗಳ ಮಾಡಬಾರದೆಂದು ಉಪದೇಶಿಸಿ ಒಬ್ಬ ವ್ಯಕ್ತಿಯನ್ನು ಜಮಾಅತಿನಿಂದ ಹೊರಹಾಕಿದ ಬಗ್ಗೆ ಹೇಳಿದರು. ಖುತ್‌ಬ ಸಾನಿಯಕ್ಕೆ ಎದ್ದು ನಿಂತಾಗ ಒಬ್ಬರು ಕೇಳಿದರು– ಹುಝೂರ್, ಜಮಾಅತಿನಿಂದ ಹೊರಹಾಕಿದ ಆ ವ್ಯಕ್ತಿಯ ಹೆಸರೇನು? ಆಗ ಇನ್ನೊಬ್ಬರು ಹೇಳಿದರು: ಖುತ್‌ಬದ ಸಮಯದಲ್ಲಿ ಮಾತನಾಡಬಾರದು ಎಂದು. ಹಝ್ರತ್ ಮುಸ್ಲಿಹ್ ಮೌಊದ್ ಮುಗುಳು ನಗುತ್ತಾ ಒಂದು ಘಟನೆ ವಿವರಿಸಿದರು: ಲೇಖ್‌ರಾಮ್ ಕೊಲ್ಲಲ್ಪಟ್ಟಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮನೆಯನ್ನು ತಪಾಸಣೆ ಮಾಡಲು ಪೋಲೀಸ್ ಅಧಿಕಾರಿ ಬಂದಿದ್ದರು. ಆ ಘಟನೆ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: "ಗುರುದಾಸ್‌ಪುರ ಜಿಲ್ಲೆಯ ಪೋಲೀಸ್ ಸುಪರಿಡೆಂಟ್ ತಪಾಸಣೆಗಾಗಿ ಬಂದಿದ್ದರು. ಆ ಪೋಲೀಸ್ ಅಧಿಕಾರಿ ಒಂದು ಚಿಕ್ಕ ಬಾಗಿಲಿನ ಮೂಲಕ ಹೋಗುವಾಗ ಬಾಗಿಲಿನ ಚೌಕಟ್ಟಿಗೆ ತಲೆತಗಲಿ ತಲೆ ತಿರುಗಿದಂತಾಯಿತು. ನಾವು ಹಾಲು ಕುಡಿಯಿರಿ ಎಂದು ಅವರೊಡನೆ ಹೇಳಿದಾಗ ಆ ಅಧಿಕಾರಿ

ನಿರಾಕರಿಸಿದರು. ನಾನು ತಪಾಸಣೆ ಮಾಡಲು ಬಂದಿದ್ದೇನೆ. ಹಾಲು ಕುಡಿಯುವುದು ನನ್ನ ಕರ್ತವ್ಯಕ್ಕೆ ವಿರುದ್ಧವಾಗುತ್ತದೆ ಎಂದು ಆ ಪೋಲೀಸ್ ಅಧಿಕಾರಿ ಹೇಳಿದರು.

ಆ ಸಂದರ್ಭದಲ್ಲಿ ಖುತ್‌ಬದಲ್ಲಿ ಪ್ರಶ್ನೆ ಕೇಳಿದ ಅದೇ ವ್ಯಕ್ತಿ ಕೇಳಿದ್ದರು– ಹುಝೂರ್ ಆ ಅಧಿಕಾರಿಯ ತಲೆಯಲ್ಲಿ ರಕ್ತ ಬಂದಿತ್ತೆ ಎಂದು ಕೇಳಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಗ ನಗುತ್ತಾ ಹೇಳಿದರು: ನಾನು ಆ ಅಧಿಕಾರಿಯ ಟೋಪಿ ತೆಗೆದು ನೋಡಲಿಲ್ಲ.”

ಈ ರೀತಿ ಕೆಲವರಿಗೆ ಪ್ರಶ್ನೆ ಕೇಳುವ ಅಭ್ಯಾಸವಿರುತ್ತದೆ. ಅನಾವಶ್ಯಕ ಪ್ರಶ್ನೆ ಕೇಳುತ್ತಾರೆ. ಆದರೆ ಖುತ್‌ಬದ ಸಂದರ್ಭದಲ್ಲಿ ಮಾತನಾಡಬಾರದು. ಮಾತ್ರವಲ್ಲ ಯಾರಾದರೂ ಮಾತನಾಡುವಾಗ ಅವರೊಡನೆ ಸುಮ್ಮನಿರು ಎಂದು ಹೇಳುವುದು ಸಹ ತಪ್ಪಾಗಿದೆ. ಕೇವಲ ಚಿಹ್ನೆಗಳ ಮೂಲಕ ಸೂಚಿಸಬಹುದು. ಅಥವಾ ಅನಂತರ ಮಾತನಾಡಬಹುದು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಈ ಬಗ್ಗೆ ಇನ್ನೊಂದು ಉಪಕಥೆ ಸಹ ಹೇಳಿದರು: ಒಬ್ಬ ಮಸ್‌ಜಿದ್‌ಗೆ ಬಂದಾಗ ಸಾಮೂಹಿಕ ನಮಾಝ್ ಜಾರಿಯಲ್ಲಿತ್ತು. ಬಂದವ ಜೋರಾಗಿ ಸಲಾಮ್ ಹೇಳಿದಾಗ ನಮಾಝ್ ಮಾಡುತ್ತಿದ್ದ ಒಬ್ಬ ವ್ಯಕ್ತಿ ವ ಅಲೈಕುಮ್‌ಸ್ಸಲಾಮ್ ಎಂದು ಹೇಳಿದ. ಆಗ ಹತ್ತಿರದಲ್ಲಿ ನಮಾಝ್ ಮಾಡುತ್ತಿದ್ದ ಇನ್ನೊಬ್ಬ ಹೇಳಿದ: ನಮಾಝ್ ಮಾಡುವಾಗ ಮಾತನಾಡಬಾರದು ಎಂದು.

ಒಟ್ಟಾರೆ ಹೇಳುವುದಾದರೆ, ಖುತ್‌ಬ ನಮಾಝಿನ ಭಾಗವಾಗಿದೆ. ಅದರಲ್ಲಿ ಮಾತನಾಡುವುದು ನಿಷಿದ್ಧವಾಗಿದೆ. ಯಾರನ್ನಾದರೂ ತಡೆಯುವ ಉದ್ದೇಶದಿಂದ ಮಾತನಾಡಬೇಕಾಗಿ ಬಂದರೆ, ಇಮಾಮ್ ಮಾತ್ರ ಖುತ್‌ಬದ ಸಮಯ ಮಾತನಾಡಬಹುದು. ನಮಾಝ್ ಅನುಷ್ಠಿಸುವಾಗ ಇಮಾಮ್ ಸಹ ಬೇರೆ ಮಾತನಾಡಬಾರದು. ಮಕ್ಕಳಿಗೆ ಮನೆಯಲ್ಲಿ ಇವುಗಳ ಬಗ್ಗೆ ಈಗಲೇ ತರಬೇತಿ ನೀಡಬೇಕು. ನಮಾಝ್ ಮಾಡುವಾಗ ಮಾತನಾಡುವುದು ನಿಷಿದ್ಧವಾಗಿರುವ ಹಾಗೆಯೇ ಖುತ್‌ಬದ ಸಂದರ್ಭದಲ್ಲಿಯೂ ಮಾತನಾಡುವುದು ನಿಷಿದ್ಧವಾಗಿದೆ.

--------------*****--------------


*Friday Sermon delivered by Hadrath Khaleefatul Masih Al Khamis*(*atba*)

*at Masjid Baithul Futhuh, London on 23-01-2015.*

Summarized by *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M P Ibrahim | ***Typing:*** U Basheer Ahmad

*Published By:* **Kannada Isha'at Team** for **Nazarath Nashr-O-Isha'ath, Qadian**

**Email**: *khutuba.kannada@gmail.com*